I) If it is true what are the reasons?

Sri Dharm Singh (Chief Minister)-

A) Yes. Government is aware of the fact that due to financial crisis Karnataka Fisheries Development Corporation Ice Plants at Managalore, Kulai. Gangolly and Karwar have been shutdown and in view of this frozen fish production has been stopped.

B) Based on the report of the State Public Sector Enterprises Restructuring Commission. Government is examining the proposal of Revival/closure of the Karnataka Fisheries Development Corporation.

C) Since the Karnataka Fisheries Development Corporation is in Financial Crisis, it has deputed 21 staff members to Karnataka State Beverages Corporation, Bangalore and few have been deputed to the Fisheries Federation, Mysore and Fisheries Department. Government is examining to provide financial assistance to pay salaries. TA and other claims to Karnataka Fisheries Development Corporation staff.

D) Yes. Due to financial crisis. Karnataka Fisheries Development Corporation is settling retirement benefits in instalments to the corporation retired employees.

E) Depending on the financial position pending claims will be settled at the earliest.

F) This will be examined while taking ultimate decision on revival/ closure of Karnataka Fisheries Development Corporation.

G) This will be examined while taking ultimate decision on revival/ closure of Karnataka Fisheries Development Corporation.

H) Based on the report of the Public Sector Restructuring Commission, Government is examing the revival/closure of the Karnataka Fisheries Development Corporation.

I) Question does not arise.

ನ್ಯಾಯಾಲಯಗಳ ಕಟ್ಟಡ ನಿರ್ಮಾಣ

267 (661) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆಯ ನ್ಯಾಯಾಲಯಕ್ಕೆ ಕಟ್ಟಡವಿಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಅಗತ್ಯವಾದ ಕಟ್ಟಡವನ್ನು ನಿರ್ಮಿಸಲು ಕೈಗೊಂಡ ಕ್ರಮಗಳು ಯಾವುವು?

ಇ) ಈ ನಿರ್ಮಾಣ ಕಾರ್ಯವನ್ನು ಪ್ರಸಕ್ತ ಸಾಲಿನಲ್ಲಿ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು)

ಅ) ಬಂದಿದೆ.

ಆ) ತುರುವೇಕೆರೆ ಗ್ರಾಮದ ಸರ್ವೆ ನಂ 169 ರಲ್ಲಿ ಎರಡು ಎಕರೆ ಜಮೀನನ್ನು ಮಾನ್ಯ ಜಿಲ್ಲಾಧೀಕಾರಿಗಳು ತುಮಕೂರು ಇವರು ನ್ಯಾಯಾಲಯ ಕಟ್ಟಡ ನಿರ್ಮಿಸಲು ಮಂಜೂರು ಮಾಡಿರುತ್ತಾರೆ ಮೇಲ್ಕಂಡ ಕಟ್ಟಡ ಕಟ್ಟುವ ಕೆಲಸವನ್ನು ಮುಂದಿನ ಸಾಲಿನ ಅಂದರೆ 2005–06ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಉಚ್ಚ ನ್ಯಾಯಾಲಯದಿಂದ ಪ್ರಸ್ತಾವನೆ ಬಂದ ನಂತರ 2005–06ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿಯನ್ನು ಸೇರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

268 (663) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1. ತುರುವೇಕೆರೆ ಪಟ್ಟಣವನ್ನು ಇದುವರೆಗೂ ಒಳಚರಂಡಿ ವ್ಯವಸ್ಥೆಗೆ ಅಳವಡಿಸದಿರಲು ಕಾರಣಗಳೇನು;

2. ಈ ವ್ಯವಸ್ಥೆಯನ್ನು ಕಲ್ಪಿಸದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ನಿಜವಲ್ಲವೇ;

3. ಹಾಗಿದ್ದಲ್ಲಿ, ಈ ಕಾರ್ಯವನ್ನು ಪ್ರಸಕ್ತ ಸಾಲಿನಿಂದಲೇ ಕೈಗೆತ್ತಿಕೊಂಡು ಜನರ ಸಮಸ್ಯೆಯನ್ನು ಹೋಗಲಾಡಿಸಲಾಗುವುದೇ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಯವರು)

1. ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸರ್ವೆ ಕೆಲಸಕ್ಕಾಗಿ 3.00 ಲಕ್ಷ ರೂ.ಗಳ ಅಂದಾಜನ್ನು ಪಟ್ಟಣ ಪಂಚಾಯಿತಿಯವರಿಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಸಲ್ಲಿಸಿದೆ. ಪಟ್ಟಣ ಪಂಚಾಯಿತಿಯಿಂದ ಹಣ ಬಿಡುಗಡೆಯಾದ ಕೂಡಲೇ ಒಳಚರಂಡಿ ಯೋಜನೆಯನ್ನು ರೂಪಿಸಲಾಗುವುದು.

2. ಹೌದು.

3. ಯೋಜನೆಯ ಶೇ. 20 ರಷ್ಟು ವೆಚ್ಚವನ್ನು ಪ್ರಾರಂಭಿಕವಾಗಿ ಪಟ್ಟಣ ಪಂಚಾಯಿತಿ ಭರಿಸಬೇಕಾಗಿದ್ದು, ಆ ಮೊತ್ತವನ್ನು ಜಲ ಮಂಡಳಿಯಲ್ಲಿ ಠೇವಣಿಯಿಟ್ಟ ಕೂಡಲೇ ಯೋಜನೆಯನ್ನು ಪ್ರಾರಂಭಿಸಲಾಗುವುದು.

269 (664) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಯಾವ ಯಾವ ಸ್ಥಳಗಳಲ್ಲಿ ಚೆಕ್ ಡ್ಯಾಮ್‌ಗಳನ್ನು ನಿರ್ಮಿಸಲಾಗಿದೆ;

ಆ) ನಿರ್ಮಿಸಿದ್ದರೆ, ಇವುಗಳಿಗೆ ತಗಲಿರುವ ವೆಚ್ಚ ಎಷ್ಟು; ಸ್ಥಳವಾರು ವೆಚ್ಚದ ವಿವರಗಳನ್ನು ಒದಗಿಸುವುದು;